ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.83/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಪ್ರಭಾಕರ್ ರೆಡ್ಡಿ** | | |
| **ತಂದೆ:ಹೆಸರು** | **ರಾಮಚಂದ್ರ ರೆಡ್ಡಿ** | **ಪಿಡಬ್ಲೂ:** | **03** |
| **ವಯಸ್ಸು** | **33 ವರ್ಷ** | **ಸಿಡಬ್ಲೂ:** | **03** |
| **ಉದ್ಯೋಗ:** | **ಸ್ಟೋರ್ ಮ್ಯಾನೇಜರ್,<br>ಆದೀಶ್ವರ ಇಂಡಿಯಾ ಲಿ.** | | |
| **ವಾಸ ಸ್ಥಳ:** | **ಬೆಂಗಳೂರು.** | | |

**ದಿನಾಂಕ 18-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ ಸ ಅ ರವರಿಂದ**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1, 2 & ಆರೋಪಿಯ ಪರಿಚಯ ಇದೆ.

ದಿ.13-02-2022 ರಂದು ಬೆ. 10-30 ರಿಂದ 11-30 ರವರೆಗೆ ಸಿಂಧನೂರಿನಲ್ಲಿರುವ ಆದೀಶ್ವರ ಶೋ ರೂಂ ನಲ್ಲಿ ನನ್ನ & ಚಾಸಾ-2 ರವರ ಸಮಕ್ಷಮ ನಿಪಿ-2 ರಂತೆ ಸ್ಥಳ ಪಂಚನಾಮೆ ಮಾಡಿದ್ದರು. ಆರೋಪಿ ಬಿಲ್ ಇಲ್ಲದೆ ಮಾಲನ್ನು ಮಾರಾಟ ಮಾಡಿದ್ದರು, ಹಣವನ್ನು ತಾವೇ ಉಪಯೋಗಿಸಿಕೊಂಡಿದ್ದರು, ಆ ಕಾರಣಕ್ಕಾಗಿ ಪಂಚನಾಮೆ ಮಾಡಿದ್ದರು. ಅದನ್ನು ಓದಿ ಹೇಳಿ ನನ್ನ ಸಹಿ ಪಡೆದಿದ್ದರು. ಆ ಕಾಲಕ್ಕೆ ಕಚ್ಚಾ ನಕಾಶೆ ತೆಗೆದಿದ್ದರು. ಸಾಕ್ಷಿಯು ನಿಪಿ-2 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಸಿ ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-3 & 4 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ರೂ.500/- ವೆಚ್ಚದ ಮೇರೆಗೆ ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಸಿಂಧನೂರು.